

## ಅನೂಷ್ಕಾ ಕಿಡಿ

ಬಿ–ಟೌನಿನ ನಟೀಮಣಿಯರಲ್ಲಿ ಸೌಂದರ್ಯಪ್ರಜ್ಞೆ ತುಸು ಹೆಚ್ಚೇ ಅನ್ನಬಹುದು. ವರ್ಷಗಟ್ಟಲೆ ಕನ್ನಡಿಯ ಮುಂದೆ ನಿಂತು ಚರ್ಮದ ಪ್ರತಿ ಬಿಂದುವನ್ನೂ ಸೂಕ್ಷ್ಮವಾಗಿ ಎಷ್ಟು ಸಾರಿ ನೋಡಿ–ಕೊಂಡರೂ ಸಮಾಧಾನವಿಲ್ಲ. ತನ್ನಲ್ಲಿ ಏನೋ ಕೊರತೆ ಇದೆ ಎಂಬ ಅನುಮಾನ ಹುಟ್ಟಿಕೊಂಡ ಮೇಲಂತೂ ಅವರ ಕೊರಗು ಹೇಳತೀರದು. ಆ ಅನುಮಾನ ಅಭಿನಯದ ವಿಚಾರದಲ್ಲಿ ಮೂಡದಿದ್ದರೂ, ಸೌಂದರ್ಯದ ವಿಚಾರದಲ್ಲಿ ಸದಾ ಕಾಡುತ್ತಲೇ ಇರುತ್ತದೆ. ಹೀಗಾಗಿಯೇ ಮುಖವನ್ನು ಕತ್ತರಿಗೊಡ್ಡಿಕೊಂಡು ಆಕಾರ ಬದಲಿಸುವ ನಟಿಯರಿಗೇನೂ ಕೊರತೆಯಿಲ್ಲ.

ಶಿಲ್ಪಾ ಶೆಟ್ಟಿ, ಪ್ರಿಯಾಂಕಾ ಚೋಪ್ರಾ ಮುಂತಾದವರೆಲ್ಲಾ ಹೀಗೆ ಮಾಡಿಯೇ ತಮ್ಮ ಆಕರ್ಷಣೆಯನ್ನು ಹೆಚ್ಚಿಸಿಕೊಂಡಿದ್ದು. ಈಗ ಆ ಸಾಲಿಗೆ ಅನೂಷ್ಕಾ ಶರ್ಮಾ ಸೇರ್ಪಡೆ–ಯಾಗಿದ್ದಾರೆ.

‘ಕಾಫಿ ವಿಥ್ ಕರಣ್’ ಕಾರ್ಯಕ್ರಮದಲ್ಲಿ ಅನೂಷ್ಕಾರನ್ನು ನೋಡಿದಾಗ ಎಲ್ಲರೂ ಬೆಚ್ಚಿ–ಬಿದ್ದಿದ್ದರು. ಅವರ ತುಟಿಯ ಆಕಾರವೇ ಬದಲಾಗಿತ್ತು. ಅನುಷ್ಕಾರ ಹೊಸ ಅವತಾರವನ್ನು ಕಂಡ ಅಭಿಮಾನಿಗಳು ಮೆಚ್ಚಿದ್ದಕ್ಕಿಂತ ತೆಗಳಿದ್ದೇ ಹೆಚ್ಚು. ಅಷ್ಟು ಚೆನ್ನಾಗಿ ಇದ್ದ ತುಟಿಯ ಆಕಾರವನ್ನು ಬದಲಿಸಿಕೊಂಡರೆ ಅಭಿಮಾನಿಗಳು ಸಲೀಸಾಗಿ ಒಪ್ಪಿಕೊಳ್ಳುವರೇ? ತುಟಿಗೆ ಕತ್ತರಿ ಪ್ರಯೋಗ ಮಾಡಿಸಿದ್ದಾರೆ ಎಂದು ಅನುಷ್ಕಾರ ಮೇಲೆ ಕೆಲವರು ಕೋಪಗೊಂಡಿದ್ದರೆ, ಇನ್ನು ಕೆಲವರು ಸಾಮಾಜಿಕ ತಾಣಗಳಲ್ಲಿ ವ್ಯಂಗ್ಯವಾಡಿದ್ದಾರೆ.

ಸ್ವಲ್ಪ ದಿನ ಸುಮ್ಮನಿದ್ದ ಅನೂಷ್ಕಾ, ಕೊನೆಗೆ ಸಿಟ್ಟಿಗೆದ್ದು “ನಾನು ನನ್ನ ತುಟಿಯನ್ನು ‘ಕತ್ತರಿ’ಯ ಅಡಿ ಕೊಟ್ಟಿಲ್ಲ, ಪ್ಲಾಸ್ಟಿಕ್ ಸರ್ಜರಿಯನ್ನು ಮಾಡಿಸಿಲ್ಲ. ಕೆಲವು ದಿನಗಳ ಮಟ್ಟಿಗೆ ಉಪಕರಣ–ವೊಂದರ ಮೂಲಕ ತಾತ್ಕಾಲಿಕವಾಗಿ ಬದಲಿಸಿಕೊಳ್ಳುತ್ತಿದ್ದೇನೆ ಅಷ್ಟೇ. ನನ್ನ ಮುಂದಿನ ಚಿತ್ರ ‘ಬಾಂಬೆ ವೆಲ್ವೆಟ್’ನ 79ರ ದಶಕದ ಜಾಸ್ ಗಾಯಕಿಯ ಪಾತ್ರಕ್ಕಾಗಿ ಈ ಬದಲಾವಣೆ. ನಾನು ‘ಏನನ್ನೋ ಮಾಡಿದ್ದೇನೆ’ ಎಂದು ಹೇಳುವುದು ಬೇಡ. ಕೆಲವು ಜೋಕರ್‌ಗಳು ಇದರ ಸುತ್ತ ಹಬ್ಬಿಸುವ ಕಥೆಗಳು ನನ್ನ ತುಟಿ ಮೇಲೆ ನಗೆ ಮೂಡಿಸುತ್ತದೆ ಅಷ್ಟೇ.. ’’ ಎಂದು ಟ್ವಿಟರ್‌ನಲ್ಲಿ ಕಿಡಿ ಕಾರಿದ್ದಾರೆ.

## ಅಲಿಯಾ ಕನಸು

‘ಸ್ಟೂಡೆಂಟ್ ಆಫ್ ದಿ ಇಯರ್’ ಮೂಲಕ ಬೆಳ್ಳಿತೆರೆಗೆ ಕಾಲಿಟ್ಟ ಚೆಲುವೆ ಅಲಿಯಾ ಭಟ್, ಪದಾರ್ಪಣೆಯ ಚಿತ್ರದ ದೊಡ್ಡ ಯಶಸ್ಸಿನ ಬಳಿಕ ಎರಡನೇ ಚಿತ್ರದ ಬಿಡುಗಡೆಗೆ ತುದಿಗಾಲಲ್ಲಿ ನಿಂತಿದ್ದಾರೆ. ಇಮ್ತಿಯಾಜ್ ಅಲಿ ನಿರ್ದೇಶನದಲ್ಲಿ ಅಲಿಯಾ ನಟಿಸಿರುವ ‘ಹೈವೇ’ ಸಿದ್ಧವಾಗಿದೆ.

ಆದರೆ ಅಲಿಯಾರಲ್ಲಿ ಕೊರಗೊಂದು ಕಾಡುತ್ತಿದೆ. ತಂದೆ ಮಹೇಶ್ ಭಟ್ ನಿರ್ದೇಶನದಲ್ಲಿ ನಟಿಸಬೇಕು ಎನ್ನುವುದು ಅಲಿಯಾರ ಮಹದಾಸೆ. ಈ ಆಸೆ ಈಡೇರುವುದು ಸಾಧ್ಯವಿಲ್ಲ ಎನ್ನುವುದೂ ಆಕೆಗೆ ಅರಿವಿದೆ. ಏಕೆಂದರೆ ಮಹೇಶ್ ಭಟ್ ನಿರ್ದೇಶನದ ಹೊಣೆಗಾರಿಕೆಯಿಂದ ದೂರ ಸರಿದು ವರ್ಷಗಳೇ ಉರುಳಿವೆ. ಅವರೇನಿದ್ದರೂ ಈಗ ನಿರ್ಮಾಣದ ಜವಾಬ್ದಾರಿಯಲ್ಲಿ ಮುಳುಗಿದ್ದಾರೆ.

ಅಲಿಯಾ ಜೊತೆಗೆ ಬೆಳ್ಳಿತೆರೆಗೆ ಕಾಲಿಟ್ಟ ವರುಣ್ ಧವನ್, ತಮ್ಮ ಎರಡನೇ ಚಿತ್ರದಲ್ಲಿ ಅಪ್ಪ ಡೇವಿಡ್ ಧವನ್ ನಿರ್ದೇಶನದಲ್ಲಿ ನಟಿಸುವ ಅವಕಾಶ ಪಡೆದಿದ್ದಾರೆ. ‘ಅಪ್ಪನ ನಿರ್ದೇಶನದಲ್ಲಿ ನಟಿಸಬೇಕು ಎನ್ನುವ ಬಯಕೆ ನನ್ನದು. ಆದರೆ ಅವರು ಮುಂದೆ ನಿರ್ದೇಶನಕ್ಕೆ ಬರುತ್ತಾರೆ ಎಂದು ನನಗೆ ಅನಿಸುತ್ತಿಲ್ಲ. ಹೀಗಾಗಿ ಅದು ಸಾಧ್ಯವಾಗುವುದಿಲ್ಲ’ ಎಂದು ಬೇಸರದಿಂದ ನುಡಿದಿದ್ದಾರೆ ಅಲಿಯಾ.

■ ಅಮಿ

